**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -272/2019**
**ಚಾಸಾ - 04 / ಪ್ರಾಸಾ - 01**

| | |
|---|---|
| ಹೆಸರು | **ಗೋಪಾಲ್** |
| ತಂದೆಯ ಹೆಸರು | **ಗಣೇಶ್** |
| ವಯಸ್ಸು | **54** |
| ಉದ್ಯೋಗ | **ವ್ಯಾಪಾರ** |
| ವಿಳಾಸ | **ತಾವರೆಕೆರೆ** |

**ದಿನಾಂಕಃ 24-01-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸುಮಾರು 7 ವರ್ಷಗಳ ಹಿಂದೆ ನಾನು ಖಾಸಗಿ ಕೆಲಸದ ನಿಮಿತ್ತ ಪೋ. ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನಿಂದ ನಿಪಿ-1 ಕ್ಕೆ ಸಹಿಯನ್ನು ಪಡೆದುಕೊಂಡರು. ನನ್ನ ಜೊತೆಯಲ್ಲಿ ಬೇರೆ ಯಾರೂ ಸಹ ನಿಪಿ-1 ಕ್ಕೆ ಸಹಿಯನ್ನು ಮಾಡಿರುವುದಿಲ್ಲ. ನನಗೆ ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.21-10-2015 ರಂದು ಸಂಜೆ 6-15 ರಿಂದ 7 ಗಂಟೆ ಸಮಯದಲ್ಲಿ

ಪ್ರಾಸಾ-1 ರವರು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-1 ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1 ಕ್ಕೆ ನಿಮ್ಮ ಜೊತೆಯಲ್ಲಿ ಚಾಸಾ-1 ಮತ್ತು 5 ರವರು ಸಹಿಯನ್ನು ಮಾಡಿದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ರಲ್ಲಿ ಇರುವ ವಿಷಯವನ್ನು ಪೋಲೀಸರು ನಿಮಗೆ ಓದಿ ತಿಳಿಸಿದ ನಂತರ ನೀವು ನಿಮ್ಮ ಸಹಿಯನ್ನು ಮಾಡಿರುತ್ತೀರಾ ಮತ್ತು ಸದರಿ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ತಿಳಿದಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸಹಿಯನ್ನು ಮಾತ್ರ ಪಡೆದುಕೊಂಡರು ಎನ್ನುತ್ತಾರೆ.

**ಪಾಟೀ ಸವಾಲುಃ- 1, 2 ಮತ್ತು 5 ನೇ ಆರೋಪಿಗಳ ಪರ ಶ್ರೀ.ಸಿ. ಎಂ, ವಕೀಲರಿಂದಃ-**

ಪಂಚನಾಮೆಗೆ ಸಾಕ್ಷಿಯಾಗಿ ಸಹಕರಿಸುವಂತೆ ಹೇಳಿ ಪೋಲೀಸರು ನನಗೆ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ನೀವು ಪಂಚನಾಮೆ ಮಾಡಿದ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ನಿಪಿ-1 ಕ್ಕೆ ನಿಮ್ಮ ಸಹಿಯನ್ನು ಠಾಣೆಯಲ್ಲಿ ಹಾಕಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಪಾಟೀ ಸವಾಲುಃ- 3 ನೇ ಆರೋಪಿಯ ಪರ ಶ್ರೀ.ಎಂ.ಆರ್.ಸಿ, ವಕೀಲರಿಂದಃ-**

3 ನೇ ಆರೋಪಿಯ ಪರ ವಕೀಲರು 2, 4 ಮತ್ತು 5 ನೇ ಆರೋಪಿಗಳ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ ಮತ್ತು ಅದಕ್ಕೆ ಅನುಮತಿಯನ್ನು ನೀಡಲಾಗಿದೆ.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**

**ಮಾಗಡಿ.**